ಓ.ಎಸ್.56/2023 ಡಿ.ಡಬ್ಲು-2
ಮೀನಾಕ್ಷಮ್ಮ ಗಂಡ ಗವಿಸಿದ್ದಪ್ಪ

ದಿ.20-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

***ಮುಖ್ಯ ವಿಚಾರಣೆ: ಪ್ರತಿವಾದಿ ನಂ;1 ಮತ್ತು 2 ಪರ ವಕೀಲರಾದ ಶ್ರೀ ಆರ್.ಎಮ್.ವಾಯ್. ರವರಿಂದ :-***

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಯಲಾಗಿರುವ ಎಲ್ಲಾ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶಗಳಿಂದ ಕೂಡಿರುತ್ತವೆ. ನಾನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ.

***ಪಾಟೀ ಸವಾಲು : ವಾದಿ ಪರ ವಕೀಲರಾದ ಶ್ರೀ ವಿ.ಪಿ.ಎಸ್.ಜೆ ರವರಿಂದ***

ನೀವು ಪ್ರಸ್ತುತ ಎಲ್ಲಿ ವಾಸಮಾಡುತ್ತಿದ್ದಿರಿ ಎಂದರೆ ಸಾಕ್ಷಿಯು ಹೊನ್ನಳ್ಳಿ ಗ್ರಾಮ ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳಿಂದ ಹೊನ್ನಳ್ಳಿ ಗ್ರಾಮದಲ್ಲಿ ವಾಸವಿದ್ದಿರಿ ಎಂದರೆ ಸಾಕ್ಷಿಯು ಅಲ್ಲಿಯೇ ಹುಟ್ಟಿ ಅಲ್ಲಿಯೇ ಬೆಳೆದಿರುತ್ತೇವೆ ಎಂದು ನುಡಿಯುತ್ತಾರೆ. ಈ ದಾವೆ ಯಾರು ಮತ್ತು ಯಾಕೆ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಬಸಲಿಂಗಮ್ಮಳು ಭಾಗ ಬೇಕೆಂದು ಹಾಕಿರುತ್ತಾಳೆ ಎಂದು ನುಡಿಯುತ್ತಾರೆ. ಬಸಲಿಂಗಮ್ಮಳ ಗಂಡನ ಹೆಸರು ಏನೆಂದರೆ ಸಾಕ್ಷಿಯು ಹನುಮಪ್ಪ ಎಂದು ನುಡಿಯುತ್ತಾರೆ. ಹನುಮಪ್ಪನಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು ಚನ್ನವೀರಮ್ಮ ಹಾಗೂ ಮಹಾಬಲೇಶ ಎಂದು ನುಡಿಯುತ್ತಾರೆ. ಹನುಮಪ್ಪ ಪೇರಿ ಇತನ ಮನೆತನಕ್ಕೆ ಒಟ್ಟು ಎಷ್ಟು ಆಸ್ತಿ ಇವೆ ಎಂದರೆ ಸಾಕ್ಷಿಯು ಒಟ್ಟು ಮೂರು ಆಸ್ತಿ ಇವೆ ಎಂದು ನುಡಿಯುತ್ತಾರೆ. ಸದರಿ ಮೂರು ಆಸ್ತಿಗಳ ಸರ್ವೆ ನಂಬರ ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ವಾದಿ ಮತ್ತು 1ನೇ ಪ್ರತಿವಾದಿ ಮಧ್ಯ ಮೂರು ಆಸ್ತಿಗಳನ್ನು ಸರಿಸಮವಾಗಿ ಭಾಗ ಆಗಿರುತ್ತದೆಯೆ ಎಂದರೆ ಸಾಕ್ಷಿಯು ಭಾಗ ಆಗಿರುತ್ತದೆ ತಾಯಿ ಬಸಲಿಂಗಮ್ಮಳಿಗೆ 2 ಎಕರೆ ಜಮೀನು ಬಿಟ್ಟಿದ್ದರು ಅದು ಆಕೆ ಮಾರಿಕೊಂಡಿದ್ದಾಳೆ ಎಂದು ನುಡಿಯುತ್ತಾರೆ. ಯಾವ ಸರ್ವೆ ನಂಬರ ಯಾರಿಗೆ, ಎಷ್ಟು ಮೊತ್ತಕ್ಕೆ ಮತ್ತು ಯಾವ ವರ್ಷದಲ್ಲಿ ಮಾರಾಟ ಮಾಡಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನು ಯಾವ ಸರ್ವೆ ನಂಬರನ ಯಾವ ಭಾಗ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ನಿಮ್ಮ ಮುಖ್ಯ ವಿಚಾರಣೆಯಲ್ಲಿ ಬರೆದಂತೆ ಯಾವ ಆಸ್ತಿ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂಧರೆ ಸಾಕ್ಷಿಯು ನನಗೆ ಗೊತ್ತಿಲ್ಲ ಸಾಕ್ಷಿಯು ಮುಂದುವರೆದು 3ನೇ ಪ್ರತಿವಾದಿ ಚನ್ನವೀರಮ್ಮಳಿಗೆ ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 3ನೇ ಪ್ರತಿವಾದಿ ಚನ್ನವೀರಮ್ಮಳಿಗೆ ಬಿಟ್ಟ ಆಸ್ತಿ ಅವರ ತಂದೆ ಹನುಮಪ್ಪ ಪೇರಿ ಒಕ್ಕಲುತನ ಬಿಟ್ಟು ಬೇರೆ ಆದಾಯದಿಂದ ಖರೀದಿ ಮಾಡಿದ ಆಸ್ತಿ

ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಆದರೆ 3ನೇ ಪ್ರತಿವಾದಿಗೆ ಉಣ್ಣಲೆಂದು ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ:35 ಮತ್ತು ಉಳಿದ ಆಸ್ತಿಗಳಲ್ಲಿ ಭಾಗ ಆಗಿದೆ ಎಂದು 1ನೇ ಪ್ರತಿವಾದಿಯೇ ಆರ್.ಆರ್.ಟಿ ನಡುವಳಿಯಲ್ಲಿ ಹೇಳಿಕೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೃತ ಹನುಮಂತಪ್ಪನಿಗೆ ವಿಭಾಗ ಮಾಡಿ ಸರ್ವೆ ನಂ:35 ನ್ನು ಚನ್ನವೀರಮ್ಮಳಿಗೆ ಸಂಪೂರ್ಣವಾಗಿ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈಗ ನೀವು ಲಿಂಗಸುಗೂರಿನ ವಿಜಯಮಹಾಂತೇಶ್ವರ ಮಠದ ಹತ್ತಿರ 15 ವರ್ಷಗಳಿಂದ ವಾಸ ಮಾಡುತ್ತಿದ್ದಿರಿ ಎಂದರೆ ಸಾಕ್ಷಿಯು ಇಲ್ಲಿಯು ಇರುತ್ತೇನೆ ಮತ್ತು ಅಲ್ಲಿಯು ಇರುತ್ತೇನೆ ಎಂದು ನುಡಿಯುತ್ತಾರೆ. ನೀವು ಈ ನ್ಯಾಯಾಲಯದಲ್ಲಿ ಬೇರೆ ಪ್ರಕರಣದಲ್ಲಿ ಭಾಗಿಯಾಗಿರುತ್ತಿರಿ ಎಂದರೆ ಸರಿ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ರೂ.3,00,000/- ಸಾಲ ಯಾರ ಬಳಿ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಬೇಕಿದ್ದವರ ಹತ್ತಿರ ತೆಗೆದುಕೊಂಡು ಆಸ್ಪತ್ರೆಗೆ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸಾಲಕ್ಕೆ ದಾಖಲೆ ಇದೆಯಾ ಎಂದರೆ ಸಾಕ್ಷಿಯು ವಿಶ್ವಾಸದ ಮೇಲೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನೀವು 1ನೇ ಪ್ರತಿವಾದಿಗೆ ಸಾಲ ಕೊಟ್ಟಿರುತ್ತಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಯಾರ ಬಳಿ ಸಾಲ ಪಡೆದಿರುತ್ತಾರೆ ಅವರ ಹೆಸರು ಗೊತ್ತಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಮಹಾಬಲೇಶನನ್ನು ಸರಕಾರಿ ಯೋಜನೆಯಾದ ಅಟಲ ಯೋಜನೆಯಡಿ ಉಚಿತವಾಗಿ ಚಿಕಿತ್ಸೆ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.